KACN320013272012

**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಕೊಳ್ಳೇಗಾಲ.</u>**

**<u>ದಿನಾಂಕಃ 04ನೇ ಫೆಬ್ರವರಿ  2026</u>**

<u>ಉಪಸ್ಥಿತರು</u>

ಶ್ರೀಮತಿ. ಕಾವ್ಯಶ್ರೀ ಎಂ.
ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ.

**<u>ಓ.ಎಸ್. ಸಂಖ್ಯೆಃ 93-2012</u>**

**ವಾದಿಗಳು** : ಶ್ರೀ ದೊಡ್ಡಮಾದಯ್ಯ ಮತ್ತು ಇನ್ನೊಬ್ಬರು

(ಪ್ರತಿನಿಧಿಸುವವರುಃ ಶ್ರೀ ಪಿ.ಎಂ., ವಕೀಲರು)

**ವಿರುದ್ದ**

**ಪ್ರತಿವಾದಿಗಳು** : ಶ್ರೀ ಮಹದೇವ ಮತ್ತು ಇನ್ನೊಬ್ಬರು

(ಪ್ರತಿನಿಧಿಸುವವರುಃ ಶ್ರೀ ಎಂ.ಆರ್.ಕೆ ., ಮತ್ತು ಪಿ.ಕೆ.ಎಸ್., ವಕೀಲರು)

**-:<u>ಮಧ್ಯಂತರ ಅರ್ಜಿ ಸಂಖ್ಯೆ 5/2019</u> :-**

ಅರ್ಜಿದಾರರು : ದೊಡ್ಡಮಾದಯ್ಯ

......... ವಾದಿ

**ವಿರುದ್ದ**

ಎದುರುದಾರರು : ಮಹದೇವ  ಮತ್ತು ಇನ್ನೊಬ್ಬರು

**........** ಪ್ರತಿವಾದಿಗಳು

| | | |
|---|---|---|
| i | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ 1 ನಿಯಮ 10(2) ಸಹವಾಚಕ ಕಲಂ 151 |
| ii | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ಪ್ರಸ್ತಾಪಿತ ಪ್ರತಿವಾದಿಯನ್ನು ಸೇರ್ಪಡೆಗೊಳಿಸಲು ಕೋರಿ |
| iii | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | 19.04.2022 |
| iv | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ 5 |
| v | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | 08.08.2022 |
| vi | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | 04.02.2026 |

**-: ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 5ರ ಮೇಲಿನ ಆದೇಶ :-**

ಅರ್ಜಿದಾರರು/ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹವಾಚಕ ಕಲಂ 151ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಪ್ರತಿವಾದಿಗಳನ್ನು ಈ ದಾವೆಯಲ್ಲಿ 3 ರಿಂದ 8ನೇ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡುವಂತೆ ಕೋರಿ ಮಧ್ಯಂತರ ಅರ್ಜಿ ಸಂಖ್ಯೆಃ 2ನ್ನು ದಾಖಲು ಮಾಡಿರುತ್ತಾರೆ.

2. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿನ ಸಂಗತಿಗಳಂತೆ, ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಹಕ್ಕು ಘೋಷಣೆ ಮತ್ತು ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಈ ದಾವೆಯ ಬಗ್ಗೆ ಸಂಪೂರ್ಣ ತಿಳುವಳಿಕೆ ಇರುತ್ತದೆ. ಈ ಅರ್ಜಿಯಲ್ಲಿನ ಎದುರುದಾರರು ಒಂದನೇ ವಾದಿಯ ಮರಣ ಹೊಂದಿದ ಸಹೋದರ ಪತ್ನಿ ಮತ್ತು ಅವರ ಗಂಡು ಮಗ ಆಗಿರುತ್ತಾರೆ. ಸದರಿಯವರು ದಾವೆ ವಿಲೇಗಾಗಿ ಬಾಕಿ ಇರುವಾಗ ಮೋಸದಿಂದ ಒಂದನೇ ಪ್ರತಿವಾದಿಯ ಜೊತೆ ಸೇರಿಕೊಂಡು ವಾದಿಯಿಂದ ದಾವಾ ಅನುಸೂಚಿತ ಸ್ವತನ್ನು ಲಪಟಾಯಿಸುವ ಉದ್ದೇಶದಿಂದ ಪ್ರಸ್ತಾಪಿಸಲ್ಪಟ್ಟ ಏಳನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ, ಎದುರುದಾರರುಗಳು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿರುತ್ತಾರೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ.

3. ಅರ್ಜಿದಾರರ ಅರ್ಜಿಯನ್ನು ದಾಖಲಿಸಿಕೊಂಡು, ನ್ಯಾಯಾಲಯವು ಪ್ರಸ್ತಾಪಿಸಲ್ಪಟ್ಟ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದ್ದು ಎದುರುದಾರರು ಅವರುಗಳಲ್ಲಿ 8ನೇ ಎದುರುದಾರರು ವಕೀಲರ ಮೂಲಕ ನ್ಯಾಯಾಲಯದ ಸಮಕ್ಷಮ ಹಾಜರಾಗಿರುತ್ತಾರೆ ಹೊರತು ತಮ್ಮ ತಕರಾರು ಸಲ್ಲಿಸಿಕೊಂಡಿರುವುದಿಲ್ಲ.

ಈ ದಾವೆಯ ಪ್ರತಿವಾದಿಯು ತಮ್ಮ ತಕರಾರು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ವಾಸ್ತವಿಕವಾಗಲೀ ಕಾನೂನಾತ್ಮಕವಾಗಲೀ ಉರ್ಜಿತವಲ್ಲವೆಂದು ತಿಳಿಸಿರುತ್ತಾರೆ. ವಾದಿಯು ಈ ದಾವೆಯಲ್ಲಿನ ಕ್ರಯದ ವ್ಯವಹರಣೆಗೆ ಸಂಭಂದಿಸಿದಂತೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಕೊಂಡಿರುವುದಿಲ್ಲ. ಮುಂದುವರೆದು, 2012 ನೇ ಸಾಲಿನ ದಾವೆಯಾಗಿದ್ದು, ಕಾಲವಿಳಂಬ ಮಾಡಿ ಪಕ್ಷಗಾರರುಗಳ ಸೇರ್ಪಡೆಯನ್ನು ಕೋರಿ ಕೊಂಡು ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಎದುರುದಾರರ ವಿರುದ್ದ ಯಾವುದೇ ವ್ಯಾಜ್ಯಕಾರಣ ಉದ್ಭವಿಸಿರುವುದಿಲ್ಲ. ಮುಂದುವರೆದು, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 16 ನಿಯಮ 1(ಎ) ರಡಿಯಲ್ಲಿನ ಅರ್ಜಿಗೆ ತಕರಾರನ್ನು ಸಲ್ಲಿಸಿಕೊಂಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರ ವಾದವನ್ನು ಆಲಿಸಲಾಯಿತು. ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಪ್ರಶ್ನೆಗಳು ಉದ್ಭವಿಸಿರುತ್ತದೆ.

1. ವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹವಾಚಕ ಕಲಂ 151ರಡಿಯಲ್ಲಿನ ಮಧ್ಯಂತರ ಅರ್ಜಿ ಸಂಖ್ಯೆ 5ನ್ನು ಮನ್ನಿಸಿ ಅರ್ಜಿಯಲ್ಲಿನ ಪ್ರಸ್ತಾವಿತ ಪ್ರತಿವಾದಿಗಳು ಈ ದಾವೆಯನ್ನು ತೀರ್ಮಾನ ಮಾಡಲು ಅವಶ್ಯಕ/ಅಗತ್ಯ ಪಕ್ಷಗಾರರಾಗಿರುತ್ತಾರೆ ಎಂಬುದನ್ನು ರುಜುವಾತು ಪಡಿಸಿರುವರೇ?

2. ಯಾವ ಆದೇಶ?

**5.** ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ **1:-** ಸಕಾರಾತ್ಮಕವಾಗಿ.

ಅಂಶ **2:-** ಈ ಕೆಳ ಕಂಡ ಆದೇಶದಂತೆ

**ಕಾರಣಗಳು**

**6.** **ಅಂಶ 1:-** ವಾದಿಯರು ದಾವಾ ಅನುಸೂಚಿತ ಸ್ವತ್ತುಗಳ ಹಕ್ಕು ಘೋಷಣೆ ಮತ್ತು ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಈ ದಾವೆಯ ಪ್ರತಿವಾದಿಯ ಪರ ಮುಂದುವರೆದ ವಿಚಾರಣೆಯ ಹಂತದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿ ಈ ಅರ್ಜಿಯ ಎದುರುದಾರರುಗಳನ್ನು ಈ ದಾವೆಯ 3 ರಿಂದ 8 ನೇ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಬೇಕಾಗಿ ಕೋರಿಕೊಂಡಿರುತ್ತಾರೆ.

ಅರ್ಜಿದಾರರ ಅರ್ಜಿಯಂತೆ, 1ನೇ ಪ್ರತಿವಾದಿಯ ಸಹೋದರನ ಪತ್ನಿ ಆತನ ಮಗ ಸ್ವತ್ತನ್ನು ಕ್ರಯಕ್ಕೆ ಪಡದ ವ್ಯಕ್ತಿಗಳಾಗಿರುತ್ತಾರೆ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಹಕ್ಕನ್ನು ಮೊಟಕಗೊಳಿಸುವ ಉದ್ದೇಶದಿಂದ ಎದುರುದಾರರುಗಳು 1ನೇ ಪ್ರತಿವಾದಿಯ ಜೊತೆ ಸೇರಿಕೊಂಡು ದಾವಾ ಅನುಸೂಚಿತ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಹಾಗಾಗಿ ಎದುರುದಾರರುಗಳು ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಈ ದಾವೆಯಲ್ಲಿ ಎದುರುದಾರರುಗಳಲ್ಲಿ ಪ್ರಸ್ತಾಪಿಸಲ್ಪಟ್ಟ ಪ್ರತಿವಾದಿ 8ರವರನ್ನು ಹೊರತುಪಡಿಸಿ ಬೇರೆ ಯಾರು ನ್ಯಾಯಾಲಯದ ಸಮಕ್ಷಮ ಹಾಜರಾಗಿರುವುದಿಲ್ಲ. ಪ್ರಸ್ತಾಪಿಸಲ್ಪಟ್ಟ ಪ್ರತಿವಾದಿಯೂ ವಕೀಲರ ಮೂಲಕ ನ್ಯಾಯಾಲಯದ ಸಮಕ್ಷಮ ಹಾಜರಾಗಿ ಅರ್ಜಿಯನ್ನು ಪುರಸ್ಕರಿಸಲು ತಮ್ಮ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಆದರೆ ಪ್ರತಿವಾದಿಯೂ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತಿಳಿಸಿರುವ ಸಂಗತಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಅರ್ಜಿಯ ಸಂಗತಿಗಳಂತೆ ಪ್ರಸ್ತಾಪಿಸಲ್ಪಟ್ಟ ಪ್ರತಿವಾದಿ 8 ರವರು ದಾವಾ ಅನುಸೂಚಿತ ಸ್ವತ್ತಿನ ಕ್ರಯದ ಕ್ರಯದಾರರಾಗಿದ್ದು ಸದರಿಯವರು ತಾನು ಕ್ರಯಕ್ಕೆ ಪಡೆದಿರುವುದಿಲ್ಲ ಎಂಬುದಾಗಿ ಯಾವುದೇ ತಕರಾರು ಮಾಡಿರುವುದಿಲ್ಲ. ಹಾಗಾಗಿ ಆ ನಿಟ್ಟಿನಲ್ಲಿ ದಾಖಲಾತಿಗಳನ್ನು ಪರಿಗಣಿಸುವ ಅವಶ್ಯಕತೆ ಇರುವುದಿಲ್ಲ. ಮುಂದುವರೆದು ವಾದಿಯು ತನ್ನ ದಾವೆಯ ಯಜಮಾನನಾಗಿದ್ದು ತನ್ನ ದಾವೆಯಲ್ಲಿ ಯಾರನ್ನು ಸೇರ್ಪಡೆ ಮಾಡಬೇಕು

ಎಂಬುದನ್ನು ತೀರ್ಮಾನಿಸುವ ಹಕ್ಕನ್ನು ಹೊಂದಿರುತ್ತಾನೆ. ಆ ನಿಟ್ಟಿನಲ್ಲಿ ಪ್ರತಿವಾದಿಯೂ ಅದನ್ನು ವಿರೋಧಿಸುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. ಯಾವ ವ್ಯಕ್ತಿಯನ್ನು ದಾವೆಯಲ್ಲಿ ಸೇರ್ಪಡೆ ಮಾಡಬೇಕು ಎಂದು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿ ಮಾತ್ರ ತನ್ನನ್ನು ಈ ದಾವೆಯಲ್ಲಿ ಯಾವ ಕಾರಣಕ್ಕಾಗಿ ಸೇರ್ಪಡೆ ಮಾಡುವಂತಿಲ್ಲ ಎಂಬುದನ್ನು ತಿಳಿಸುವ ಹಕ್ಕನ್ನು ಹೊಂದಿರುತ್ತಾನೆ. ಹಾಗಾಗಿ ಈ ದಾವೆಯಲ್ಲಿ ಪ್ರತಿವಾದಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲು ಯಾವುದೇ ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ.

7. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರಲ್ಲಿ, "ನ್ಯಾಯಾಲಯವು ಪಕ್ಷಕಾರರನ್ನು ತೆಗೆದುಹಾಕಬಹುದು ಅಥವಾ ಸೇರ್ಪಡೆ ಮಾಡಬಹುದು. ಯಾವನೇ ಪಕ್ಷಕಾರನ ಅರ್ಜಿಯ ಮೇಲೆ ಅಥವಾ ಅದಿಲ್ಲದೇ ಮತ್ತು ನ್ಯಾಯಲಯಕ್ಕೆ ನ್ಯಾಯೋಚಿತವೆಂದು ತೋರಬಹುದಾದಂತಹ ನಿಬಂಧನೆಗ ಮೇಲೆ, ವಾದಿಯಾಗಿ ಅಥವಾ ಪ್ರತಿವಾದಿಯಾಗಿ ಅನುಚಿತವಾಗಿ ಸೇರಿಸಲಾದ ಯಾವನೇ ಪಕ್ಷಕಾರನ ಹೆಸರನ್ನು ತೆಗೆದುಹಾಕಬೇಕೆಂದು ಮತ್ತು ವಾದಿಯಾಗಿ ಅಥವಾ ಪ್ರತಿವಾದಿಯಾಗಿ ಸೇರಿಸಬೇಕಾಗಿದ್ದ ಅಥವ ಆ ದಾವೆಯಲ್ಲಿ ಒಳಗೊಂಡ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಮತ್ತು ಸಂಪೂರ್ಣವಾಗಿ ನ್ಯಾಯ ನಿರ್ಣಯಿಸಲು ಮತ್ತು ಇತ್ಯರ್ಥಗೊಳಿಸಲು ನ್ಯಾಯಾಲಯಕ್ಕೆ ಸಾಧ್ಯವಾಗುವಂತೆ ಮಾಡುವುದಕ್ಕಾಗಿ ನ್ಯಾಯಾಲಯದಲ್ಲಿ ಯಾರ ಹಾಜರಾತಿಯು ಅವಶ್ಯವೆನಿಸಬಹುದೋ ಆ ಯಾವನೇ ವ್ಯಕ್ತಿಯ ಹೆಸರನ್ನು ಸೇರಿಸಬೇಕೆಂದು ವಿಚಾರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಆದೇಶಿಸಬಹುದು" ಎಂಬುದಾಗಿ ತಿಳಿಸಿರುತ್ತದೆ. ಅದರಂತೆ, ಯಾವುದೇ ಒಂದು ದಾವೆಯಲ್ಲಿ, ಒಬ್ಬ ಪಕ್ಷಗಾರನ ಅರ್ಜಿಯ ಆಧಾರದ ಮೇರೆಗೆ ಅಥವಾ ನ್ಯಾಯಾಲಯದ ಸ್ವತಃ ದಾವೆಯಲ್ಲಿನ ಸಂಗತಿಯನ್ನು ಪರಿಣಾಮಕಾರಿಯಾಗಿ ತೀರ್ಮಾನಿಸುವ ನಿಟ್ಟಿನಲ್ಲಿ ಅವಶ್ಯಕ ಪಕ್ಷಗಾರರನ್ನು ದಾವೆಗೆ ಸೇರ್ಪಡೆ ಮಾಡಬಹುದಾಗಿರುತ್ತದೆ ಅಥವಾ ದಾವೆಯಿಂದ ತೆಗೆದು ಹಾಕಬಹುದಾಗಿರುತ್ತದೆ. ಆ ರೀತಿಯಾಗಿ ಯಾವುದೇ ಒಂದು ದಾವೆಯಲ್ಲಿ ಯಾವುದೇ ಒಬ್ಬ ಪಕಗಾರರನ್ನು ಸೇರ್ಪಡೆ ಮಾಡುವುದು ಅಥವಾ ತೆಗೆದು ಹಾಕುವುದು ಆಯಾಯಾ ದಾವೆಯಲ್ಲಿನ ಸಂಗತಿಗಳ ಮೇಲೆ ನಿರ್ಧರಿಸಲ್ಪಡುತ್ತದೆ. ಅಂದರೆ ಆ ರೀತಿ ಸೇರ್ಪಡೆ ಮಾಡಬಹುದಾದ ಪಕ್ಷಗಾರನು ದಾವೆಯಲ್ಲಿನ ಸಂಗತಿಯನ್ನು ಪರಿಣಾಮಕಾರಿಯಾಗಿ ನಿರ್ಧರಿಸುವ ನಿಟ್ಟಿನಲ್ಲಿ ಅವಶ್ಯಕ ಪಕ್ಷಗಾರನಾಗಿರತಕ್ಕದ್ದು.

8. ವಾದಿಯು ದಾವಾ ಅನುಸೂಚಿತ ಸ್ವತ್ತುಗಳಲ್ಲಿ ಮಾಲೀಕತ್ವದ ಹಕ್ಕು ಘೋಷಣೆ ಕೋರಿ ದಾವೆ ದಾಖಲು ಮಾಡಿರುತ್ತಾರೆ. ಎದುರುದಾರರು ಸದರಿ ಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಅರ್ಜಿದಾರರ, ಅರ್ಜಿ ಮತ್ತು ಎದುರುದಾರರ

ತಕರಾರಿನಂತೆ, ಈ ಅರ್ಜಿಯ ಎದುರುದಾರರು ಸ್ವತ್ತಿನ ಖಾತೆಯನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂಬುದಕ್ಕೆ ಅಧಿವಿಚಾರಣೆ ಅವಶ್ಯಕತೆ ಇರುತ್ತದೆ. ಈ ಹಂತದಲ್ಲಿ ಎದುರುದಾರರು ದಾವಾ ಅನುಸೂಚಿತ ಸ್ವತ್ತಿನ ಖಾತೆಯನ್ನು ವರ್ಗಾವಣೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿ ಇರುತ್ತದೆ ಎಂಬುದು ಈ ಹಂತದಲ್ಲಿ ಮೇಲ್ನೊಟಕ್ಕೆ ಕಂಡುಬಂದಿರುತ್ತದೆ.

9. ಮುಂದುವರೆದು ದಾವಾ ಅನುಸೂಚಿತ ಸ್ವತ್ತಿನ 1ನೇ ಪ್ರತಿವಾದಿ ಮತ್ತು ಅವರ ಸಹೋದರರ ಪತ್ನಿ ಮತ್ತು ಮಕ್ಕಳುಗಳು ಸೇರಿ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಆ ಸಂಗತಿಯನ್ನು ಖಂಡಿಸುವಂತಹ ಯಾವುದೇ ಸಂಗತಿಗಳು ಲಭ್ಯವಿರುವುದಿಲ್ಲ. ದಾವಾ ಅನುಸೂಚಿತ ಸ್ವತ್ತನ್ನು ಈ ಅರ್ಜಿಯಲ್ಲಿನ ಎದುರುದಾರರುಗಳು ಮಾರಾಟ ಮಾಡಿರುವ ಕಾರಣದಿಂದಾಗಿ ಈ ದಾವೆಯಲ್ಲಿನ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರ್ಧರಿಸುವ ನಿಟ್ಟಿನಲ್ಲಿ ಎದುರುದಾರರು ಸಹ ಅವಶ್ಯಕ ಪಕ್ಷಗಾರರಾಗಿರುತ್ತಾರೆ. ಈ ದಾವೆಯಲ್ಲಿ ಎದುರುದಾರರನ್ನು ಸೇರ್ಪಡೆ ಮಾಡಲು ದಾವೆಯಲ್ಲಿನ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರ್ಧರಿಸಲು ಸಹಾಯವಾಗುತ್ತದೆ. ಒಂದು ವೇಳೆ ಅರ್ಜಿಯನ್ನು ವಜಾಗೊಳಿಸಿದಲ್ಲಿ ದಾವೆಯ ಬಾಹುಳ್ಯ ಹೆಚ್ಚಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ ಹಾಗೂ ದಾವೆಯಲ್ಲಿನ ಸಂಗತಿಗಳನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಾದಿಯ ದಾವೆಯಲ್ಲಿನ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರ್ಧರಿಸಲು ಎದುರುದಾರರು ಅವಶ್ಯಕ ಪಕ್ಷಗಾರರಾಗುತ್ತಾರೆ. ಈ ದಾವೆಯಲ್ಲಿ, ಎದುರುದಾರರನ್ನು ಸೇರ್ಪಡೆ ಮಾಡುವುದರಿಂದ ದಾವೆಯಲ್ಲಿನ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರ್ಣಯಿಸಲು ಸಹಾಯಕವಾಗುತ್ತದೆ. ಒಂದು ವೇಳೆ ಅರ್ಜಿಯನ್ನು ವಜಾಗೊಳಿಸಿದ್ದೇ ಆದಲ್ಲಿ, ದಾವೆಯ ಬಾಹುಳ್ಯ ಹೆಚ್ಚಾಗುತ್ತದೆ ಎಂಬ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ. ಅದರಂತೆ, ವಾದಿಯ ದಾವೆಯಲ್ಲಿನ ಸಂಗತಿಯನ್ನು ಪರಿಣಾಮಕಾರಿಯಾಗಿ ನಿರ್ಣಯಿಸಲು ಎದುರುದಾರರು ಅವಶ್ಯಕ ಪಕ್ಷಗಾರರಾಗಿರುತ್ತಾರೆ. ಆದ್ದರಿಂದ, **ಅಂಶ-1** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

10. **ಅಂಶ-2 :-** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆ,

ಓ.ಎಸ್.93/2012

## ಆದೇಶ

ಅರ್ಜಿದಾರರು/ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ **5** ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10(2)** ಸಹವಾಚಕ ಕಲಂ **151** ರಡಿಯಲ್ಲಿನ ಅರ್ಜಿಯನ್ನು ರೂ. **500-00**ಗಳ ಖರ್ಚನ್ನು ಭರಿಸುವಂತೆ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ ವಾದಿಯು ಪ್ರಸ್ತಾಪಿಸಲ್ಪಟ್ಟ ಪ್ರತಿವಾದಿಗಳನ್ನು **3** ರಿಂದ **8**ನೇ ಪ್ರತಿವಾದಿಗಳನ್ನಾಗಿ ದಾವೆಗೆ ಸೇರ್ಪಡೆ ಮಾಡುವಂತೆ ಆದೇಶಿಸಲಾಗಿದೆ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ **04**ನೇ ಫೆಬ್ರವರಿ **2026**ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

(ಕಾವ್ಯಶ್ರೀ ಎಂ)
ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.

**(ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

**<u>ಆದೇಶ</u>**

ಅರ್ಜಿದಾರರು/ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ **5** ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10(2)** ಸಹವಾಚಕ ಕಲಂ **151** ರಡಿಯಲ್ಲಿನ ಅರ್ಜಿಯನ್ನು ರೂ**. 500-00**ಗಳ ಖರ್ಚನ್ನು ಭರಿಸುವಂತೆ ಪುರಸ್ಕರಿಸಲಾಗಿದೆ**.**

ಸದರಿ ಆದೇಶದಂತೆ ವಾದಿಯು ಪ್ರಸ್ತಾಪಿಸಲ್ಪಟ್ಟ ಪ್ರತಿವಾದಿಗಳನ್ನು **3** ರಿಂದ **8**ನೇ ಪ್ರತಿವಾದಿಗಳನ್ನಾಗಿ ದಾವೆಗೆ ಸೇರ್ಪಡೆ ಮಾಡುವಂತೆ ಆದೇಶಿಸಲಾಗಿದೆ**.**

ಸದರಿ ಆದೇಶವಾದ **08** ದಿನಗಳ ಒಳಗಾಗಿ ವಾದಿಯು ತಮ್ಮ ವಾದ ಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು**.**

ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ **11.02.2026**

**PCJ & JMFC., KOLLEGAL.**